ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 09.10.2023

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ : ಶ್ರೀ ಪಿ.ಸಿ. ಎಸ್.ವಕೀಲರಿಂದಃ**

1) ಮದಾರಬಿ ನನಗೆ ಸಹೋದರಿಯಾಗಬೇಕು. 4 ನೇ ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಮದಾರಬಿ ಜಮೀನು ಇದ ಎಂದರೆ ಸರಿ. ನಾನು ದಾವೆ ದಾಖಲು ಮಾಡುವ ಪೂರ್ವದಲ್ಲಿ ಪ್ರತಿವಾದಿಯರು ಸರ್ವೆ ಇಲಾಖೆಯಲ್ಲಿ ಹದ್ದು ಬಸ್ತುಗಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆ ಪ್ರಕಾರ ದಿಃ 28.03.2018 ರಂದು ನಮಗೆ ಎಲ್ಲರಿಗೂ ನೋಟೀಸು ನೀಡಿ ಹದ್ದು ಬಸ್ತು ಮಾಡಿರುತ್ತಾರೆ ಎಂದರೆ ಸರಿ. ಆದರೆ ಹದ್ದು ಬಸ್ತು ಸರಿ ಮಾಡಿರುವುದಿಲ್ಲ ನಾವು ಅದಕ್ಕೆ ಸಹಿ ಮಾಡಿರುವುದಿಲ್ಲ. 4 ನೇ ಪ್ರತಿವಾದಿಯರ ಜಮೀನಿನ ಪೂರ್ವಕ್ಕೆ ಮದಾರಬಿ 3 ಗುಂಟ ಜಮೀನು ಒತ್ತುವರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2) ಮದಾರಬಿ ಮತ್ತು ನಾನು ಸರ್ವೆ ಹದ್ದು ಬಸ್ತು ಆದೇಶ ಮೇಲೆ ಇಲ್ಲಿಯವರೆಗೂ ಯಾವುದೇ ಅಪೀಲು ಮಾಡಿರುವುದಿಲ್ಲ. ನನಗೆ ಅಪೀಲು ಮಾಡಲು ಯಾವುದೇ ತೊಂದರೆ ಇದ್ದಿರಲಿಲ್ಲ ಎಂದರೆ ಸರಿ. 4 ನೇ ಪ್ರತಿವಾದಿ ಒತ್ತುವರಿ ಜಮೀನನ್ನು ಮದಾರಬಿಗೆ ಬಿಟ್ಟು ಕೊಡಲು ಪದೇ ಪದೇ ಕೇಳಿದರು ಎಂದರೆ ಸರಿಯಲ್ಲ. ನಂತರ ಜಮೀನಿನಲ್ಲಿ ಯಾವುದೇ ದಾರಿ ಇಲ್ಲದಿದ್ದರೂ ಸಹ 3 ಗುಂಟೆ ಜಮೀನನ್ನು ಬಿಟ್ಟು ಕೊಡದೇ ಈ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

3) 4 ನೇ ಪ್ರತಿವಾದಿ ನಂತರ 3 ಗುಂಟೆ ಜಮೀನನ್ನು ತನ್ನ ಕಬ್ಜೆಗೆ ತೆಗೆದುಕೊಂಡು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. 2018 ರಿಂದ ಇಲ್ಲಿಯವರೆಗೆ ನಮ್ಮ ಜಮೀನು ಹದ್ದು ಬಸ್ತು ಮಾಡಿಸಿಕೊಂಡಿರುವುದಿಲ್ಲ. ಪ್ರತಿವಾದಿಯರು ಹದ್ದು ಬಸ್ತು ಮಾಡಿದ ನಕ್ಷೆ ಇಲ್ಲಿಯವರೆಗೂ ಚಾಲ್ತಿಯಲ್ಲಿದ್ದು, ನಾವು ಅಪೀಲು ಮಾಡಿರುವುದಿಲ್ಲ ಎಂದರೆ ಸರಿ. ಹದ್ದು ಬಸ್ತು ನಕ್ಷೆಯಲ್ಲಿ ನಾವು ಆಧರಿಸುವ ಯಾವುದೇ ದಾರಿ ಇಲ್ಲ ಎಂದರೆ ಸರಿಯಲ್ಲ.

4) ಪ್ರತಿವಾದಿಯರು ಸಲ್ಲಿಸಿದ ತಕರಾರು ಮತ್ತು ನಕ್ಷೆಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಪ್ರ ನಾನು ಹಾಜರುಪಡಿಸಿದ ಹಾತ್ ನಕಾಶೆಯ ಸ್ಥಿತಿಗಳಗಳ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯಲ್ಲಿ ದಾರಿ ಇದ್ದಬ ಗ್ಗೆ ಸಾರ್ವಜನಿಕ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. .ನನ್ನ ಜಮೀನಿನ ದಕ್ಷಿಣ, ಉತ್ತರ, ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಯಾವ ಜಮೀನು ಬರುತ್ತದೆ ಎಂದು ನನಗೆ ಗೊತ್ತಿಲ್ಲ.

5) ಈ ದಾವೆಯಲ್ಲಿ ಚೆಕ್ಕುಬಂದಿಯನ್ನು ಯಾವ ಆಧಾರದ ಮೇಲೆ ಬರೆಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಮದಾರಬಿ ಜಮೀನಿನ ಪೂರ್ವ ದಿಕ್ಕಿಗೆ ನನ್ನ ಜಮೀನು ಬರುತ್ತದೆ ಎಂದರೆ ಸರಿ. ಈ ದಾವೆಯಲ್ಲಿ ಮದಾರಬಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. ಸದರಿಯವರು ಬೇರೆ ಯಾವುದೇ ದಾವೆ ಸಲ್ಲಿಸಿರುವುದಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.